ಮೋದಿರವರು ಕಳೆದ ವಿಧಾನಸಭಾ ಚುನಾವಣೆ ಪ್ರಚಾರದಲ್ಲಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಶೇ. 10 ಸರ್ಕಾರ ಎಂದು ಆರೋಪ ಮಾಡಿದ್ದರು.

■ ಡಿ.ಕೆ.ಸುರೇಶ್ | ಸಂಸದರು

ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಮಾಡಿದ ವರುಣರಾಯ | ಆತಂಕದಲ್ಲಿ ರೈತರು

ಮಳೆ ಅಪಾರ ಮೌಲ್ಯದ ರಾಗಿ ಬೆಳೆ ನಷ್ಟ

ಸಂ.ಕ. ಸಮಾಚಾರ, ನಲ್ಲೂರು

ಈ ಬಾರಿ ರಾಗಿ ಬೆಳೆ ಉತ್ತಮವಾಗಿ ಬೆಳೆದಿದ್ದು, ಸುಮಾರು ಒಂದೂವರೆ ತಿಂಗಳಿನಿಂದ ಮಳೆ ಹೆಚ್ಚಾಗಿ ಸುರಿದ ಕಾರಣ ಬೆಳೆ ಕೈಗೆ ಬರುವ ಬದಲು ನೆಲ ಕಚ್ಚಿದೆ, ಇದರಿಂದ ರಾಗಿ ತೆನೆಯಲ್ಲೇ ಕಾಳುಗಳು ಮೊಳಕೆಯೊಡೆದಿದ್ದು, ಬಂದಿದ್ದು ಕೊಯ್ಯುವಷ್ಟರಲ್ಲಿ ಕಾಳು ಉದುರಿಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರೈತರು ಹೇಳುತ್ತಾರೆ.

1 ಎಕರೆಗೆ ಸುಮಾರು 10 ರಿಂದ 12 ಸಾವಿರ ಬಂಡವಾಳ ಹಾಕಿ ರಾಗಿ ಬೆಳೆ ಬೆಳೆದರೆ ಸುಮಾರು 10 ವರ್ಷಗಳಿಂದ ಸರಿಯಾದ ಸಮಯಕ್ಕೆ ಮಳೆ ಬರದೆ ಬೆಳೆ ನಾಶವಾಗುತ್ತಿತ್ತು, ಆದರೆ ಈ ಬಾರಿ ಮಳೆ ಹೆಚ್ಚಾಗಿ ಬೆಳೆ ಹಾಳಾಗಿದ್ದು ಇರುವುದನ್ನು ಹೊಲ ಕೊಯ್ಯುವ ಯಂತ್ರದಲ್ಲಿ ಕೊಯ್ಯುವಂತಾಗಿದೆ ಇದರಿಂದ ರಾಗಿತೆನೆ ಅರ್ಧ ಉದುರಿಹೋಗುತ್ತದೆ. ಎಷ್ಟಾದರೂ ಸಿಗಲಿ ಎಂಬುವ ದೃಷ್ಟಿಯಿಂದ ರೈತರು ಆಂದ್ರತಮಿಳುನಾಡಿನ ರಾಜ್ಯಗಳಿಂದ ಯಂತ್ರಗಳನ್ನು ತರಿಸಿಕೊಂಡು ಹೊಲ ಕೊಯ್ಲು ಮಾಡುತ್ತಿರುವುದು ದೇವನಹಳ್ಳಿ ತಾಲ್ಲುಕು ಚನ್ನರಾಯಪಟ್ಟಣ ಹೋಬಳಿಯಲ್ಲಿ ಹೆಚ್ಚಾಗಿ ಕಾಣಬಹುದು.

ದೇವನಹಳ್ಳಿ ತಾಲ್ಲೂಕು ನಲ್ಲೂರು ಗ್ರಾಮದ ಬಳಿ ರಾಗಿ ಹೊಲ ನೆಲ ಕಚ್ಚಿರುವುದನ್ನು ಯಂತ್ರದ ಮುಖಾಂತರ ಕಟಾವು ಮಾಡಲಾಯಿತು.

ಎಕರೆಗೆ ಬಂಡವಾಳ ಹಾಕಿ ಉಳಿಮೆ ಮಾಡುವುದರಿಂದ ಕಟಾವು ಮಾಡುವುದಕ್ಕೆ ಸುಮಾರು 20 ಸಾವಿರ ರೂಗಳು ವೆಚ್ಚವಾಗಿರುತ್ತದೆ. ರಾಗಿ ಬೆಳೆ ನಷ್ಟದ ಸರ್ಕಾರ ಪರಿಹಾರ ಕೊಡುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ ಆ ಪರಿಹಾರ ಆರೆಕಾಸಿನ ಆನೆಯ ಬಾಯಿಗೆ ತುಪ್ಪ ಸುರಿದಂತಾಗುತ್ತಿದೆ. ಈ ಭಾರಿ ಬೆಳೆಯ ಮೇಲೆ ಅಪಾರ ನಿರೀಕ್ಷೆ ಇಟ್ಟುಕೊಂಡ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಮಾಡಿದ ವರುಣರಾಯ.

ಈ ಬಾರಿ ಹೊಲದಲ್ಲಿ ಹೆಚ್ಚು ಮಳೆಯಿಂದ ಅವರೆಗಿಡವು ನಾಶವಾಗಿದ್ದು ಹೊಲದಲ್ಲಿ ತೆನೆ ಕೊಯ್ಯಿಸಬೇಕಾದರೆ ಹೆಣ್ಣಾಳಿಗೂ 400 ರಿಂದ 500 ರೂಗಳನ್ನು ದಿನಕ್ಕೆ ಕೂಲಿ ಕೊಡುವ ಪರಿಸ್ಥಿತಿಯಾಗಿದೆ ಯಂತ್ರದಿಂದ ಕೊಯ್ಯಿಸಿದರೆ ಗಂಟೆಗೆ 4 ಸಾವಿರ ರೂಗಳು ಕೇಳುತ್ತಾರೆ ಅರ್ಧಂಭರ್ಧ ರಾಗಿ ಕೈಗೆ ಸಿಗುತ್ತಿದೆ ಬಿಸಿಲು ಕೂಡ ಇಲ್ಲದೇ ಮೋಡದ ವಾತಾವರಣದಲ್ಲಿ ರಾಗಿಯು ಒಣಗುವುದಿಲ್ಲ ಹುಲ್ಲು ಮಳೆಗೆ ನೆನೆದು ಕಪ್ಪಾಗಿ ದನಕರುಗಳು ತಿನ್ನುವ ಪರಿಸ್ಥಿತಿ ಇಲ್ಲದಂತಾಗಿದೆ. ಈ ಬಾರಿ ರಾಗಿ ಬೆಳೆ ಸೇರಿದಂತೆ ಎಲ್ಲಾ ಬೆಳೆಗಳಿಂದ ರೈತರು ನಷ್ಟ ಅನುಭವಿಸುವಂತಾಗಿದೆ.

ಅಪಘಾತ ಓರ್ವ ಸಾವು

ಸಂ.ಕ. ಸಮಾಚಾರ, ದೇವನಹಳ್ಳಿ

ದ್ವಿಚಕ್ರವಾಹನದಿಂದ ಆಯತಪ್ಪಿ ಬಿದ್ದು ವ್ಯಕ್ತಿ ಓರ್ವ ಸಾವನ್ನಪ್ಪಿರುವ ಘಟನೆ ಪಟ್ಟಣದ ಹೊರವಲಯದ ಸಾವಕನಹಳ್ಳಿ ಗೇಟ್ ಸಮೀಪದಲ್ಲಿ ನಡೆದಿದೆ.

ನೀರಗಂಟಿಪಾಳ್ಯದ ಆನಂದ್ (38) ಮೃತಪಟ್ಟ ದುರ್ದೈವಿ. ದೇವನಹಳ್ಳಿ ತಾಲೂಕು ಆಸ್ಪತ್ರೆಯಲ್ಲಿ ಡಿ ದರ್ಜೆ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದರು. ದೊಡ್ಡಬಳ್ಳಾಪುರ ಕಡೆ ಹೋಗುವಾಗ ದೊಡ್ಡಕೆರೆಯಿಂದ ಮುಂದೆ ಸಂಚರಿಸುವಾಗ ದ್ವಿಚಕ್ರವಾಹನ ಆಯತಪ್ಪಿ ಬಿದ್ದಿದ್ದರಿಂದ ಸಾವನ್ನಪ್ಪಿದ್ದಾರೆ. ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

IN THE COURT OF THE XVI ADDITIONAL SMALL CAUSES JUDGE ACMM AT BENGALURU (SCCH-14)
SC. No. 434/2021
BETWEEN : STATE BANK OF INDIA, Head Office at St. Marks Road, Bengaluru Branch Office: Race Course Road Branch, Bengaluru - 560 001. Represented by its Chief Manager, Smt. Sprihа Jamuar ...PLAINTIFF
AND : Anand M ...DEFENDANT
ADDRESS OF THE DEFENDANT
Anand M, S/o. Marihonnaiah, aged 46 years, No. 3064, 10th C Cross, C Block, Gayatrinagar, Srirampuram, Bengaluru - 560 021.
Also at : Mallya and Mallya, No 29/2, 1st Floor, Parijatha Complex, Racecourse Road, Bengaluru 560001.
SUMMONS TO THE DEFENDANT UNDER ORDER V RULE 20 (1-A) READ WITH SECTION 151 OF THE CODE OF CIVIL PROCEDURE, 1908
Whereas, the plaintiff has filed the above suit for recovery of sum of Rs. 76,785/- (Rupees Seventy six thousand seven hundred and eighty five only) with interest thereon at 14.90% per annum from the date of suit to the date of realization and for other relief against the defendant before the Hon'ble XVI ADDITIONAL SMALL CAUSES JUDGE (SCCH - 13) AND ACMM AT BENGALURU.
Now the above case is posted on 23.12.2021, therefore you are hereby called upon to appear before the Hon'ble XVI ADDITIONAL SMALL CAUSES JUDGE (SCCH - 14) AND ACMM AT BENGALURU on 23.12.2021 that day at 11.00 am in person or duly instructed attorney, or else, the case will be determined in your absence as ex-parte.
Given under my hand and seal of the Court this notice is issued on 03.12.2021.
By Order of the Court, Assistant Registrar, Court of Small Cause, Bangalore.
Rakshith Jois Y.P, Advocate
"Samarthana Legal"
No. 53/5, 1st Floor, Jai Santoshima Complex, I Main Road, Seshadripuram, Bengaluru - 560 020.

TATA
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.
ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ
[2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 9(1) ಅಡಿಯಲ್ಲಿ]
ಸ್ಥಿರಾಸ್ತಿಗಳ ವಿವರಗಳು: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ಮನೆ ಖಾಲಿ ಸೈಟ್ ಸಂಖ್ಯೆ 12, ಹಳೆಯ ಖಾತಾ ನಂ.521, ಹೊಸ ಖಾತಾ ನಂ.349, ಪರಿವರ್ತಿತ ಸೈ.ನಂ.100 ರಲ್ಲಿ ರೂಪುಗೊಂಡಿದೆ. ಪರಿವರ್ತನೆ ಆದೇಶ No.BDA.ALN(EB) SR 154/2007-08, ದಿನಾಂಕ 30/10/2008, ವಿಶೇಷ ಡೆಪ್ಯೂಟಿ ಹೊಸಡಿಸಿದ ಆಯುಕ್ತರು ಬೆಂಗಳೂರು, ಬೆಂಗಳೂರು ಪೂರ್ವ ತಾಲೂಕಿನ ಬಿದರಹಳ್ಳಿ ಹೋಬಳಿ, ಬೊಮ್ಮನಹಳ್ಳಿ ಗ್ರಾಮದಲ್ಲಿ ನೆಲೆಸಿದ್ದಾದೆ ಮತ್ತು ಅಳತೆ ಪೂರ್ವದಿಂದ ಪಶ್ಚಿಮಕ್ಕೆ (22.6+24)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (36+38)/2 ಅಡಿ, ಒಟ್ಟು 869.09 ಚದರ ಅಡಿ ಅಳತೆಯಲ್ಲಿ ಎಲ್ಲಾ ಹಕ್ಕುಗಳು, ಮೇಲ್ಮೈ ಕೆಳಗೆ ಅಥವಾ ಮೇಲೆ ಯಾವುದೇ ರೀತಿಯಲ್ಲಿ ಉಳಿದುಹೋಗಿರುವ ಮತ್ತು ಚಕ್ಕುಬಂದಿ: ಪೂರ್ವದಿಂದ: ಸೈಟ್ ನಂ.11, ಪಶ್ಚಿಮದಿಂದ: ಖಾಸಗಿ ಆಸ್ತಿ, ಉತ್ತರದಿಂದ: ಖಾಸಗಿ ಆಸ್ತಿ, ದಕ್ಷಿಣದಿಂದ: ರಸ್ತೆ.
ಸ್ಥಳ: - ಬೆಂಗಳೂರು
ದಿನಾಂಕ- 03/12/2021
ಸಹಿ/ -ಶ್ರೀ ಅಭಿಜಿತ್ ಭಟ್, ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್., ಮೊ. ನಂ. 9029073280

ಬಿಜೆಪಿ ಚುನಾವಣೆ ಯಾರ ಜೊತೆಯೂ ಹೊಂದಾಣಿಕೆ ಇಲ್ಲ

ಸಂ.ಕ. ಸಮಾಚಾರ, ಹೊಸಕೋಟೆ

ಬಿಜೆಪಿ ಒಂದು ರಾಷ್ಟ್ರೀಯ ಪಕ್ಷವಾಗಿದ್ದು, ಸ್ಥಳೀಯ ಪ್ರಾದೇಶಿಕ ಪಕ್ಷಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ವಿಧಾನ ಪರಿಷತ್ ಚುನಾವಣೆ ಬಿಜೆಪಿ ಅಭ್ಯರ್ಥಿ ನಾರಾಯಣಸ್ವಾಮಿ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಚುನಾವಣಾ ಮತಯಾಚನೆ ಕಾರ್ಯಕ್ರಮದಲ್ಲಿ ಮಾತನಾಡಿ, ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಉತ್ತಮವಾಗಿ ಜನಪರ ಆಡಳಿತ ನೀಡುತ್ತಿದ್ದು, ಮುಂದಿನ ದಿನಗಳಲ್ಲೂ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಆದ್ದರಿಂದ ವಿಧಾನ ಪರಿಷತ್ ಚುನಾವಣೆಯಲ್ಲೂ ಸಹ ನನಗೆ ಆಶೀರ್ವಾದ ಮಾಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಸಚಿವ ಎಂಟಿಬಿ ನಾಗರಾಜ್ ಅವರೊಂದಿಗೆ ನಿರಂತರವಾಗಿ ಶ್ರಮಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿದರು.

ಬಿಎಂಆರ್‌ಡಿಎ ಅಧ್ಯಕ್ಷ ಸಿ.ನಾಗರಾಜ್, ನಗರಸಭೆ ಅಧ್ಯಕ್ಷೆ ಶೋಭಾ ಜುಂಜಪ್ಪ, ನಿಕಟಪೂರ್ವ ಅಧ್ಯಕ್ಷ ಅರುಣ್‌ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಸೋಮಶೇಖರ್, ಎಸ್‌ಸಿ ಮೋರ್ಚಾ ಅಧ್ಯಕ್ಷ ನಾಗೇಶ್ ಇತರರಿದ್ದರು.

ಎಂಎಲ್‌ಎ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಮನವಿ

ಸಂ.ಕ. ಸಮಾಚಾರ, ನೆಲಮಂಗಲ

ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಪೂರಕವಾದ ವಾತಾವರಣ ಸಾಕಷ್ಟಿದ್ದು, ನಮ್ಮ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹಾಗೂ ಚುನಾಯಿತ ಪ್ರತಿನಿಧಿಗಳು ಪಕ್ಷದ ಅಭ್ಯರ್ಥಿ ಎಸ್.ರವಿ ಅವರ ಮೂಲಕ ನಮ್ಮ ಅಭ್ಯರ್ಥಿಗೆ ಮತ ನೀಡುವಂತೆ ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಎಸ್.ರವಿ ಮಾತನಾಡಿ, ನಾನು ಎರಡು ಬಾರಿ ಗೆಲುವು ಸಾಧಿಸಿದಾಗಲೂ ಪಕ್ಷಾತೀತವಾಗಿ ಕೆಲಸ ಮಾಡಿ ಜನಪ್ರತಿನಿಧಿಗಳ ಕಷ್ಟಸುಖಗಳಲ್ಲಿ ಭಾಗಿಯಾಗಿದ್ದೇನೆ. ಈ

ಗೆಲುವಿಗೆ ಶ್ರಮಿಸಬೇಕು ಎಂದು ಕಾಂಗ್ರೆಸ್ ಮುಖಂಡ ಗೋವಿಂದರಾಜು ಮನವಿ ಮಾಡಿದರು.

ಅಗಳಕುಪ್ಪೆಯ ನಿವಾಸದಲ್ಲಿ ಎಂಎಲ್‌ಎ ಚುನಾವಣೆಯ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದರು.

ನಮ್ಮ ಪಕ್ಷದ ಬೆಂಬಲಿತ ಸದಸ್ಯರ ಜೊತೆಗೆ ಇತರ ಸದಸ್ಯರಿಗೂ ವಸ್ತುಸ್ಥಿತಿಯನ್ನು ತಿಳಿಸುವ ಬಾರಿಯೂ ನನ್ನ ಗೆಲುವಿಗೆ ಶ್ರಮಿಸಿ ನಿಮ್ಮ ಮತವನ್ನು ನೀಡಿದರೆ ನಿಮ್ಮ ಮನೆಯ ಮಗನಾಗಿ ಕೆಲಸ ಮಾಡುತ್ತೇನೆ ಎಂದರು.

ಸೋಂಪುರ ಹೋಬಳಿಯಲ್ಲಿ ಮತಯಾಚನೆಗೆ ಬಂದಿದ್ದ ಕಾಂಗ್ರೆಸ್ ಅಭ್ಯರ್ಥಿ ಎಸ್.ರವಿ ಮತಯಾಚನೆ ಸಂದರ್ಭದಲ್ಲಿ ಬಿಜೆಪಿ, ಜೆಡಿಎಸ್ ಬೆಂಬಲಿತ ಪಕ್ಷಗಳ ಮತದಾರರು ಭಾಗಿಯಾಗಿದ್ದರು.

ಕೋವಿಡ್ ಪರಿಣಾಮಕಾರಿ ತಡೆಗೆ ಮುನ್ನೆಚ್ಚರಿಕೆಯೇ ಪ್ರಮುಖ ಮದ್ದು

ಸಂ.ಕ. ಸಮಾಚಾರ, ವಿಜಯಪುರ

ಕೋವಿಡ್ 3ನೇ ಅಲೆ ತಡೆಗಟ್ಟುವ ನಿಟ್ಟಿನಲ್ಲಿ ಜನರು ಮೈಮರೆಯದಂತೆ ಜಾಗೃತಿ ವಹಿಸಿ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಹಾಗು ಪ್ರತಿಯೊಬ್ಬರೂ ಲಸಿಕೆ ಪಡೆಯಬೇಕು ಎಂದು ಮಾಜಿ ಪುರಸಭೆ ಸದಸ್ಯರಾದ ಏಜಾಜ ಅಹಮದ್ ಹೇಳಿದರು.

ಇಲ್ಲಿನ 22ನೇ ವಾರ್ಡ್‌ನ ಆಯಾಜ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪ್ರತಿಯೊಬ್ಬರೂ ನಿರ್ಭೀತಿಯಿಂದ ಲಸಿಕೆ ಪಡೆದುಕೊಳ್ಳುವ ಮೂಲಕ ಕೋವಿಡ್ ವಿರುದ್ಧವಾಗಿ ಹೋರಾಟ ಮಾಡುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಲಸಿಕೆಯಿಂದ ಅಡ್ಡಪರಿಣಾಮಗಳಾಗುತ್ತವೆ ಎನ್ನುವ ಭಯ ಇನ್ನೂ ಸ್ವಲ್ಪಮಟ್ಟಿಗೆ ಜನರಲ್ಲಿದೆ. ಅದನ್ನು ಹೋಗಲಾಡಿಸಬೇಕಾಗಿದೆ. 18 ವರ್ಷ ಮೇಲ್ಪಟ್ಟವರೆಲ್ಲರೂ ಕಡ್ಡಾಯವಾಗಿ ಲಸಿಕೆ ಪಡೆದುಕೊಂಡು ತಮ್ಮ ಆರೋಗ್ಯದ ಕಡೆಗೆ ಗಮನಹರಿಸಬೇಕು ಎಂದರು.

ದೇಶದಲ್ಲಿ ಕೋವಿಡ್ ಲಸಿಕೆ ಪಡೆದುಕೊಂಡಿರುವವರಲ್ಲಿ ಕೋವಿಡ್ ಸೋಂಕು ಕಂಡು ಬಂದರೂ ಅದರ ಪರಿಣಾಮ ತೀರಾ ಕಡಿಮೆಯಾಗಿದೆ. ಸಾವಿನ ಸಂಖ್ಯೆಯಲ್ಲೂ ತೀವ್ರವಾಗಿ ಇಳಿಮುಖವಾಗುತ್ತಿದೆ. ಆದ್ದರಿಂದ ಲಸಿಕೆಯ ಕುರಿತು ಯುವಜನರು ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಒಕ್ಕಲಿಗರ ಸಮುದಾಯದ ಏಳ್ಗೆಗೆ ಶ್ರಮಿಸುವವರನ್ನು ಗೆಲ್ಲಿಸಲು ಸಲಹೆ

ಒಕ್ಕಲಿಗರ ಸಂಘದ ಚುನಾವಣೆ ಪ್ರಚಾರದಲ್ಲಿ ಅಭ್ಯರ್ಥಿ ಎಂ.ಎಸ್.ಉಮಾಪತಿ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಿದರು.

ಸಂ.ಕ. ಸಮಾಚಾರ, ದೇವನಹಳ್ಳಿ

ರಾಜ್ಯ ಒಕ್ಕಲಿಗರಸಂಘದ ಚುನಾವಣೆ ಡಿ.12 ರಂದು ನಡೆಯಲಿದ್ದು, ಡಾ.ಟಿ.ಎಚ್.ಆಂಜನಪ್ಪ ಹಾಗು ಡಾ.ಕೆ.ನಾರಾಯಣಗೌಡರ ಬಣವನ್ನು ಗೆಲ್ಲಿಸುವ ಕೆಲಸ ಮಾಡಬೇಕು ಎಂದು ದೇವನಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಎ.ವಿ.ನಾರಾಯಣಸ್ವಾಮಿ ತಿಳಿಸಿದರು.

ದೇವನಹಳ್ಳಿ ಸಮೀಪದ ಆವತಿ ಗ್ರಾಮದಲ್ಲಿ ಒಕ್ಕಲಿಗರ ಸಂಘದ ಚುನಾವಣಾ ಪ್ರಚಾರದ ವೇಳೆ ಮಾತನಾಡಿ, ಡಾ.ಟಿ.ಎಚ್.ಆಂಜನಪ್ಪ ಹಾಗು ಡಾ.ಕೆ.ನಾರಾಯಣಗೌಡರ ಬಣದಲ್ಲಿ ಎಲ್ಲಾ ಹೊಸಬರಿದ್ದು ಅವರನ್ನು ಆಯ್ಕೆ ಮಾಡಿದರೆ ಸಮುದಾಯದ ಏಳ್ಗೆಗಾಗಿ ಎಲ್ಲರು ಶ್ರಮಿಸಲಿದ್ದಾರೆ ಎಂದರು.

ರಾಜ್ಯ ಒಕ್ಕಲಿಗರ ಸಂಘದ ಅಭ್ಯರ್ಥಿ ಎಂ.ಎಸ್.ಉಮಾಪತಿ ಮಾತನಾಡಿ, ಒಕ್ಕಲಿಗ ಸಮುದಾಯ ಆರ್ಥಿಕ ಹಾಗು ಶೈಕ್ಷಣಿಕವಾಗಿ ಮೇಲೆ ಬರಬೇಕಾದರೆ ಮತದಾರರು ನಮ್ಮ ತಂಡವನ್ನು ಆಯ್ಕೆ ಮಾಡಿದರೆ ಹಂತಹಂತವಾಗಿ ಅವರ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಒಕ್ಕಲಿಗ ಸಮುದಾಯದ ಮುಖಂಡರಾದ ಭುವನಹಳ್ಳಿ ಮುನಿರಾಜು, ವಕೀಲರಾದ ಬೈರೇಗೌಡ, ಎಚ್.ಎಂ.ರವಿಕುಮಾರ್, ನಿಲೇರಿ ಅಂಬರೀಶ್, ಮಂಜುನಾಥ್, ಲಕ್ಷ್ಮೀನಾರಾಯಣಪ್ಪ, ಬಸವರಾಜು, ಮುನೇಗೌಡ ಮುಂತಾದವರು ಇದ್ದರು.

ಬೆಟ್ಟಹಳ್ಳಿ ಕೆರೆಗೆ ಬಾಗಿನ ಅರ್ಪಣೆ

ಸಂ.ಕ. ಸಮಾಚಾರ, ಸೂಲಿಬೆಲೆ

ಸಮೀಪದ ಬೆಟ್ಟಹಳ್ಳಿ ಕೆರೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಬಾಗಿನ ಸಮರ್ಪಣೆ ಕಾರ್ಯಕ್ರಮ ಗಿಡ್ಡಪ್ಪನಹಳ್ಳಿ ಗ್ರಾ.ಪಂ. ಅಧ್ಯಕ್ಷ ಆಕ್ಟರ್ ಆಲಿಖಾನ್, ಉಪಾಧ್ಯಕ್ಷೆ ನಿವೇದಿತಾ ಹೇಮಂತಗೌಡರ ನೇತೃತ್ವದಲ್ಲಿ ನಡೆಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ನಮ್ಮೂರ ನಮ್ಮ ಕೆರೆ ಯೋಜನೆಯಡಿಯಲ್ಲಿ ಸುಮಾರು 15 ಲಕ್ಷ ವೆಚ್ಚದಲ್ಲಿ ಕೆರೆಯ ಹೂಳೆತ್ತುವ ಕೆಲಸ ಮಾಡಲಾಗಿದ್ದು ಉತ್ತಮ ಮಳೆಯಾದ

ಹಿನ್ನೆಲೆಯಲ್ಲಿ ನೀರಿನ ಸಂಗ್ರಹವಾಗಿದ್ದು ಈ ದಿನ ಕೆರೆಯ ಅಭಿವೃದ್ಧಿ ಹಸ್ತಾಂತರ ಹಾಗೂ ಬಾಗಿನ ಅರ್ಪಣೆ ಮಾಡುತ್ತಿದ್ದೇವೆ ಎಂದು ಜಿಲ್ಲಾ ನಿರ್ದೇಶಕರಾದ ಸತೀಶ್ ನಾಯ್ಕ್ ಹೇಳಿದರು.

ಹೊಸಕೋಟೆ ತಾಲೂಕು ಯೋಜನಾಧಿಕಾರಿ ಭೋಜಾ, ಕೆರೆ ಸಮಿತಿ ಸದಸ್ಯರಾದ ಲಕ್ಷ್ಮಣ್, ಮುನಿಸೋಣ್ಣಪ್ಪ, ಗ್ರಾ.ಪಂ. ಸದಸ್ಯ ವೆಂಕಟೇಶ್, ಮೇಲ್ವಿಚಾರಕ ವಿಶ್ವನಾಥ್, ಕೃಷಿ ಮೇಲ್ವಿಚಾರಕ ಶಿವಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೋವಿಂದೇಗೌಡ ಇತರರು ಇದ್ದರು.

ಸಾಹಿತ್ಯ ಕ್ಷೇತ್ರದ ಅಭಿವೃದ್ಧಿ ಅಗತ್ಯ

ಸಂ.ಕ.ಸಮಾಚಾರ ನೆಲಮಂಗಲ

ನಮ್ಮ ನಾಡಿನಲ್ಲಿ ಕುವೆಂಪು ಬೆಳಕಿಗೆ ಬಾರದ ದಿನಗಳಿದ್ದವು. ಆದರೆ ಅವರಿಂದ ಸೃಷ್ಟಿಯಾದಂತಹ ಕಾವ್ಯ ಮತ್ತು ಸಮಾಜಕ್ಕೆ ಆದರ್ಶಪ್ರಾಯ ಸಂಗತಿಗಳು ಪ್ರಪಂಚದಾದ್ಯಂತ ವಿಸ್ತರಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ ಎಂದು ಇತಿಹಾಸ ತಜ್ಞ ಡಾ.ಎಚ್.ಹೆಸ್.ಗೋಪಾಲರಾವ್ ಹೇಳಿದರು.

ನೆಲಮಂಗಲ ನಗರದ ಗಾರ್ಡನ್ ಹೋಟೆಲ್ ಸಭಾಂಗಣದಲ್ಲಿ ನಮ್ಮ ಮಿತ್ರ ಸಾಂಸ್ಕೃತಿಕ ಬಳಗವು ಏರ್ಪಡಿಸಿದ್ದ 66ನೇ ಕನ್ನಡ ರಾಜ್ಯೋತ್ಸವ ಹಾಗೂ ಸಾಹಿತಿ ಮತ್ತು ಲೇಖಕ ಡಾ.ಎನ್.ಮುರುಳೀಧರ್ ಅವರ ಲೇಖನಿಯಿಂದ ಮೂಡಿಬಂದ ಐದು ಪುಸ್ತಕಗಳ ಲೋಕಾರ್ಪಣೆ ನೆರವೇರಿಸಿ ಮಾತನಾಡಿದರು.

ತಾಲ್ಲೂಕು ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎನ್.ಜಿ.ಗೋಪಾಲ್ ಮಾತನಾಡಿ, ಪುಸ್ತಕಗಳನ್ನು ಓದುವ ಮತ್ತು ವಿಷಯವನ್ನು ಮಸ್ತಕಕ್ಕೆ ಸೇರಿಸುವ ಮನಸ್ಸುಗಳಿಗೆ ಕೊರತೆಯುಂಟಾಗಿದೆ. ಇದರಿಂದ ಪ್ರಕಾಶಕರು ಮತ್ತು ಲೇಖಕರು ತೀವ್ರ ಸಂಕಷ್ಟಕ್ಕೊಳಗಾಗುತ್ತಿರುವ ಈ ದಿನಗಳಲ್ಲಿ ಲೇಖಕರಿಗೆ ಕೊರತೆಯಿಲ್ಲವೆಂಬ ಸಂಗತಿಯನ್ನು ಸ್ಥಳೀಯ ಲೇಖಕ ಡಾ.ಮುರುಳೀಧರ್ ಸಾಭೀತುಪಡಿಸಿದ್ದಾರೆ ಎಂದರು.

ಐದು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದ ಅನು